**ಮಿಸ್ ನಂ. 11/2019 ಪಿಡಬ್ಲ್ಯು: 1 ಅನಿತ ಅಭಿಜಿತ್ ಜೈನ್**

**ಸಾಕ್ಷಿಯನ್ನು ದಿಃ 18.03.2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎ.ಎಸ್. ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ರುವ ವಿಷಯಗಳು ತಿಳಿದಿರುತ್ತದೆ. 1 ನೇ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ದಾವ 1 ನೇ ಅನುಸೂಚಿ ಸ್ವತ್ತು ಸುರೇಶ್ ಮತ್ತು ರೂಪ ಸುರೇಶ್ ರವರ ಹೆಸರಿನಲ್ಲಿ ಇತ್ತು. 3 ನೇ ಪ್ರತಿವಾದಿ ಸಂಸ್ಥೆ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆಸ್ತಿಯ ಮೇಲೆ ಪ್ರಕೃತಿ ಫುಡ್ಸ್ ರವರ ವಿಳಾಸ ಮತ್ತು ಹೆಸರನ್ನು ಹಾಕಿರುತ್ತಾರೆ. ಪ್ರಕೃತಿ ಫುಡ್ಸ್ ರವರಿಗೆ ಪರವಾನಗಿ ಇರುತ್ತದೂ ಇಲ್ಲವೋ ನಾನು ಸಂಬಂಧ ಪಟ್ಟ ಕಾರ್ಪೋರೇಷನ್ ನಲ್ಲಿ ವಿಚಾರ ಮಾಡಿ ತಿಳಿದುಕೊಂಡಿರುವುದಿಲ್ಲ. 3 ನೇ ಸಂಸ್ಥೆಯು ಎಂ.ಎಸ್.ಎಂ.ಇ.ಯು.ಎಂ ನಲ್ಲಿ ಯಾರ ಹೆಸರನಲ್ಲಿ ನೊಂದಣಿ ಆಗಿರುತ್ತದೆ ಎಂದು ನಾನು

ತಿಳಿದುಕೊಂಡಿರುವುದಿಲ್ಲ. ನಾನು ಸದರಿ ಆಸ್ತಿಗೆ ಸಂಬಂಧಿಸಿದಂತೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ ಪಡೆದುಕೊಂಡಿರುವುದಿಲ್ಲ. ಅದು ಯಾರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಗೊತ್ತಿಲ್ಲ. ನನಗೆ ಸದರಿ ದಾಖಲೆಯನ್ನು ಪಡೆದು ಪರೀಶಿಲನೆ ಮಾಡಲು ತೊಂದರೆ ಇರಲಿಲ್ಲ. ನನ್ನ ಪ್ರಕಾರ 1 ಮತ್ತು 2 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ 1 ನೇ ಅನುಸೂಚಿ ಸ್ವತ್ತನ್ನು ಪರಭಾರೆ ಮಾಡಿರುತ್ತಾರೆ. ಪರಭಾರೆ ಮಾಡಿರುವ ಬಗ್ಗೆ ಮತ್ತು ಸ್ವಾಧೀನ ಹಸ್ತಾಂತರ ಮಾಡಿರುವ ಬಗ್ಗೆ ದಾಖಲಾತಿ ಇರುವುದಿಲ್ಲ. ನನಗೆ ಯಾರೋ ಮೂರನೇ ವ್ಯಕ್ತಿ 1 ಮತ್ತು 2 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಗೆ 1 ನೇ ಅನುಸೂಚಿ ಸ್ವತ್ತನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದು ತಿಳಿಸಿದ್ದು ಅದರ ಆಧಾರದ ಮೇರೆಗೆ 1 ಮತ್ತು 2 ನೇ ಪ್ರತಿವಾದಿಗಳು ಪರಭಾರೆ ಮಾಡಿರುತ್ತಾರೆ ಎಂದು ನುಡಿಯುತ್ತಿದ್ದೇನೆ. ನಾನು ಬಾಡಿಗೆ ಕರಾರು ಪತ್ರವನ್ನು ನೋಡಿರುವುದಿಲ್ಲ. ಬಾಡಿಗೆ ಪಾವತಿ ಮಾಡಿದ ಬಗ್ಗೆ ಯಾವುದೇ ರಶೀದಿಯನ್ನು ನಾನು ನೋಡಿರುವುದಿಲ್ಲ. ಪರಭಾರೆ ಮಾಡಿರುವ ಬಗ್ಗೆ ನಾನು ಛಾಯ ಚಿತ್ರಗಳನ್ನು ಹೊರತು ಪಡಿಸಿ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಹಾಜರು ಪಡಿಸಿರುವ ಛಾಯ ಚಿತ್ರಗಳಲ್ಲಿ ಯಾರ ಹೆಸರಿನಲ್ಲಿ ಪ್ರಕೃತಿ ಫುಡ್ಸ್ ಇರುತ್ತದೆ ಎಂದು ನಮೂದು ಇರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರು ವಾಣಿಜ್ಯೋದ್ಯಮಿಗಳು ಇರುತ್ತಾರೆ ಎಂದರೆ ಸರಿ. ಅವರಿಗೆ ಕಾರ್ಖಾನೆ ಇರುತ್ತದೆ ಎಂದರೆ ಸರಿ.

ಪ್ರಕೃತಿ ಫುಡ್ಸ್ ರೂಪ ಸುರೇಶ್ ರವರು ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಕಾರ್ಪೊರೇಷನ್‌ನಲ್ಲಿ ರೂಪ ಸುರೇಶ್ ರವರು ಪಕೃತಿ ಫುಡ್ಸ್ ನಡೆಸಲು ಪರವಾನಗಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರಳಾದ ರೂಪ ಸುರೇಶ್ ರವರ ಹೆಸರಿನಲ್ಲಿ ಭಾರತ ಸರ್ಕಾರದ ಎಂ.ಎಸ್.ಎಂ.ಇ.ಯು.ಎಂ ನಲ್ಲಿ ನೊಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಫುಡ್ ಸೇಫ್ಟಿ ಅಂಡ್ ಸ್ಟ್ಯಾಂರ್ಡಡ್ ಅಥಾರಿಟಿ ಆಫ್ ಇಂಡಿಯಾ ದಲ್ಲಿ 1 ನೇ ಎದುರುದಾರಳಾದ ರೂಪ ಸುರೇಶ್ ರವರ ಹೆಸರಿನಲ್ಲಿ ನೊಂದಣಿ ಇರುತ್ತದೆ ಎಂದರೆ ಸರಿಯಲ್ಲ. ಪ್ರಕೃತಿ ಫುಡ್ಸ್ 1 ನೇ ಎದುರುದಾರಳಾದ ರೂಪ ಸುರೇಶ್ ರವರ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯ ದಿಃ 01.07.2009 ನಲ್ಲಿ ನೀಡಿದ್ದ ಆದೇಶವನ್ನು ದಿಃ

17.03.2014 ರಂದು ಹಿಂದಕ್ಕೆ ಪಡೆದಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ನ್ಯಾಯಾಲಯದ ನಿರ್ಬಂಧಕಾಜ್ಞೆ ಆದೇಶ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮೈಸೂರಿನಲ್ಲಿ ಐ.ಪಿ.ಸಿ. ಕಲಂ 306 ರ ಅಡಿಯಲ್ಲಿ ಮೊಕದ್ದಮೆ ಚಾಲ್ತಿಯಲ್ಲಿದೆ ಎಂದರೆ ಸರಿ. ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾದ ಕಾರಣ ನಾನು ಎದುರುದಾರರಿಗೆ ತೊಂದರೆ ಕೊಡಲು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಅಭಿಜಿತ್ ಜೈನ್ 1 ಮತ್ತು 2 ನೇ ಎದುರುದಾರರ ಒಬ್ಬನೇ ಮಗ ಇರುತ್ತಾನೆ ಎಂದರೆ ಸರಿ. ನನ್ನ ಗಂಡ ಮೃತ ಪಟ್ಟ ಹಲವಾರು ವರ್ಷಗಳ ನಂತರ ನಾನು 1 ಮತ್ತು 2 ನೇ ಎದುರುದಾರರ ವಿರುದ್ಧ ಐ.ಪಿ.ಸಿ. ಕಲಂ 498(ಎ) ಅಡಿಯಲ್ಲಿ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಛಾಯ ಚಿತ್ರಗಳಲ್ಲಿ ಕಂಡು ಬರುವ ಪ್ರಕೃತಿ ಫುಡ್ಸ್ 1 ನೇ ಎದುರುದಾರರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ.

ನಿಪಿ. 2 ರಲ್ಲಿ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನಮೂದು ಇಲ್ಲ ಎಂದರೆ ಸರಿ. ಯಾವುದೇ ನ್ಯಾಯಾಲಯದ ಆದೇಶ ಉಲ್ಲಂಘನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಡುವಳಿಗಳೂ ನಿದಾನವಾಗಬೇಕೆಂಬ ಉದ್ದೇಶದಿಂದ ಈ ಅರ್ಜಿಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕೃತಿ ಫುಡ್ಸ್ ನ ವಿದ್ಯುತಚ್ಛಕ್ತಿ ಬಿಲ್ಲನ್ನು ಕೂಡ 1 ನೇ ಎದುರುದಾರಳು ಪಾವತಿ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.